**<u>ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತುಃ</u>**

**<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಓ ಸಿ ಎನ್ ವಕೀಲರಿಂದಃ</u>**

7. ಚಿಪ್ಪಿನಕೆರೆ ಗ್ರಾಮದಲ್ಲಿ ನನ್ನ ತಂದೆಗೆ ಸೇರಿದ 7 ಎಕರೆ ಜಮೀನು ಇತ್ತು. ಈ ಕುರಿತು ನನ್ನ ವಕೀಲರಿಗೆ ತಿಳಿಸಿರುತ್ತೇನೆ. ಆ ಜಮೀನಿನ ಸರ್ವೆ ನಂ.5. ಆ ಜಮೀನಿನ ಪೋಡ್ ನಂಬರ್ ನನಗೆ ಗೊತ್ತಿಲ್ಲ. ಸದರಿ ಜಮೀನು ನನ್ನ ತಂದೆಗೆ ನಮ್ಮ ತಾತನಿಂದ ಬಂದಿರುತ್ತದೆ. ನನ್ನ ತಂದೆಗೆ ಒಬ್ಬ ತಮ್ಮ ಇದ್ದ. ನನ್ನ ತಂದೆಯ ತಮ್ಮನಿಗೂ 7 ಎಕರೆ ಜಮೀನು ಇತ್ತು. ನನ್ನ ತಂದೆಯ ತಮ್ಮನಿಗೆ ಚಿಪ್ಪಿನಕೆರೆ ಗ್ರಾಮದಲ್ಲಿ 7 ಎಕರೆ ಜಮೀನು ಇತ್ತು ಎಂದು ತೋರಿಸಲು ದಾಖಲೆಯನ್ನು ಕೊಟ್ಟಿರುತ್ತೇನೆ. ನನ್ನ ತಂದೆಯ ತಮ್ಮನಿಗೆ 7 ಎಕರೆ ಜಮೀನು ಇತ್ತು ಎಂದು ಹೇಳುತ್ತಿರುವುದು ಸುಳ್ಳು ಆ ಕುರಿತು ದಾಖಲಾತಿಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಕೂನಬೇವು ಗ್ರಾಮದ ಸರ್ವೆ ನಂ.163/7 ಜಮೀನು ಈಗ ನನ್ನ ತಮ್ಮ ಮಂಜಣ್ಣನ ಹೆಸರಿನಲ್ಲಿರುತ್ತದೆ. ಸದರಿ ಜಮೀನು ನನ್ನ ತಮ್ಮನ ಹೆಸರಿಗೆ ಕರಾರು ಪತ್ರದ ಮೂಲಕ ಆಗಿರುತ್ತದೆ. 2005 ನೇ ಸಾಲಿನಲ್ಲಿ ನನ್ನ ತಮ್ಮನ ಹೆಸರಿಗೆ ಆಗಿರುತ್ತದೆ. ನನ್ನ ತಮ್ಮನ ಹೆಸರಿಗೆ ಶಿವಣ್ಣ ಎನ್ನುವವರು ಮಾರಾಟ ಮಾಡಿರುತ್ತಾರೆ. ನನ್ನ ತಮ್ಮನ ಹೆಸರಿಗೆ 4 ಎಕರೆ 4 ಗುಂಟೆ ಜಮೀನನ್ನ ಮಾರಾಟ ಮಾಡಿದ್ದರು. ಚಿಪ್ಪಿನಕೆರೆ ಗ್ರಾಮದಲ್ಲಿ ನನ್ನ ತಂದೆಯ ಹೆಸರಿನಲ್ಲಿರುವ ಜಮೀನು ಯಾವ ವರ್ಷ ಮಾರಾಟ ಮಾಡಿದ್ದೀರ ಎಂದರೆ ಸಾಕ್ಷಿಯು 2002 ರಲ್ಲಿ ಮಾರಾಟ ಮಾಡಿರುತ್ತೇವೆ ಎನ್ನುತ್ತಾರೆ. ಸದರಿ ಜಮೀನನ್ನು ಸಣ್ಣ ಬೋರಯ್ಯ ಎನ್ನುವವರಿಗೆ ಮಾರಾಟ ಮಾಡಿದ್ದೆವು. ಸದರಿ ಜಮೀನನ್ನು ಎಷ್ಟು ಹಣಕ್ಕೆ ಮಾರಾಟ ಮಾಡಿದ್ದೆವು ಎಂದು ನನಗೆ ನೆನಪಿಲ್ಲ.

8. ನಲ್ಲವಗಳ ತಿಪ್ಪೇಸ್ವಾಮಿಯವರು 2001-02 ರಲ್ಲಿ ದಾವೆ ಮಾಡಿದ್ದರು. ಆ ದಾವೆಯನ್ನು ನಲ್ಲವಗಳ ತಿಪ್ಪೇಸ್ವಾಮಿಯವರ ಜಮೀನಿನ ಪಕ್ಕದಲ್ಲಿ ನಮ್ಮ ಜಮೀನು ಇದ್ದುದರಿಂದ ಅದನ್ನು ತೆಗೆದುಕೊಳ್ಳುವ ಸಲುವಾಗಿ ಹೂಡಿದ್ದರು. ನಲ್ಲವಗಳ ತಿಪ್ಪೇಸ್ವಾಮಿಯವರ ಜೊತೆ ಯಾವುದೇ ವ್ಯವಹಾರ ಮಾಡಿರಲಿಲ್ಲ. ನಲ್ಲವಗಳ

ತಿಪ್ಪೇಸ್ವಾಮಿಯವರ ಜೊತೆ ದಾವೆ ಮಾಡಿರುವ ವಿಚಾರವಾಗಿ ನಿಮ್ಮ ವಕೀಲರಿಗೆ ಯಾವುದಾದರೂ ದಾಖಲೆಗಳನ್ನು ನೀಡಿದ್ದೀರ ಎಂದರೆ ಸಾಕ್ಷಿಯು ನೀಡಿದ್ದೆವು ಎನ್ನುತ್ತಾರೆ. ಕರಾರು ಪತ್ರದ ನಕಲು ಪ್ರತಿಯನ್ನು ವಕೀಲರಿಗೆ ಕೊಟ್ಟಿದ್ದೆವು. ನನ್ನ ತಂದೆಯ ಹೆಸರಿನಲ್ಲಿದ್ದ ಜಮೀನನ್ನು ಮಾರಾಟ ಮಾಡಿ ನನ್ನ ತಮ್ಮ ಪ್ರತಿವಾದಿಯ ಹೆಸರಿನಲ್ಲಿ ಜಮೀನನ್ನು ಖರೀದಿಸಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕೂನಬೇವು ಗ್ರಾಮದ ಸರ್ವೆ ನಂ.137/1 ಕ್ಷೇತ್ರ 3 ಎಕರೆ 10 ಗುಂಟೆ ಜಮೀನು ನಮ್ಮ ತಂದೆಗೆ ಸೇರಿದ ಜಮೀನು ಎಂದು ವಕೀಲರಿಗೆ ಮಾಹಿತಿ ನೀಡಿದ್ದೀರಾ ಎಂದರೆ ಸಾಕ್ಷಿಯು ಅದು ನಮ್ಮ ತಾಯಿಯ ಆಸ್ತಿ ಎನ್ನುತ್ತಾರೆ. ಸರ್ವೆ ನಂ.163/7 ರ ಜಮೀನಿಗೆ ಸಂಬಂಧಿಸಿದಂತೆ ಪ್ರತಿವಾದಿಗೆ ಖಾತೆ ಬದಲಾವಣೆಯಾಗುವ ಸಮಯದಲ್ಲಿ ನನಗೂ ಹಕ್ಕು ಇದೆ ಎಂದು ತಕರಾರು ಸಲ್ಲಿಸಿದ್ದೀರಾ ಎಂದರೆ ಸಲ್ಲಿಸಿಲ್ಲ ಎನ್ನುತ್ತಾರೆ. ಸದರಿ ಸ್ವತ್ತು ಒಟ್ಟು ಕುಟುಂಬದ ಆಸ್ತಿ ಇಬ್ಬರ ಹೆಸರಿನಲ್ಲೂ ಖಾತೆ ಮಾಡಲು ಅರ್ಜಿ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿಯು ಮೌಖಿಕವಾಗಿ ಸೆಕ್ರೆಟರಿಯವರಿಗೆ ಹೇಳಿದ್ದೆವು ಎನ್ನುತ್ತಾರೆ. ಸರ್ವೆ ನಂ.163/7 ರ ಜಮೀನು ಪಿತ್ರಾರ್ಜಿತ ಸ್ವತ್ತು ಅಲ್ಲ ಅದು ಪ್ರತಿವಾದಿ ಮಂಜಣ್ಣನವರಿಗೆ ಸೇರಿದ ಸ್ವತ್ತು ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ನನಗಾಗಲೀ ಬೇರೆಯವರಿಗಾಗಲೀ ಹಕ್ಕು ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ.

9. ನಿಮ್ಮ ಮತ್ತು ಪ್ರತಿವಾದಿಯ ನಡುವೆ ಕರಾರು ಪತ್ರ ಯಾವಾಗ ಆಗಿತ್ತು ಎಂದರೆ ಸಾಕ್ಷಿಯು 2016-17 ಸಾಲಿನಲ್ಲಿ ಆಗಿತ್ತು ಎನ್ನುತ್ತಾರೆ. ಸದರಿ ಕರಾರು ಪತ್ರ ಚಿತ್ರದುರ್ಗದಲ್ಲಿ ಆಗಿರುತ್ತದೆ. ಸದರಿ ಕರಾರು ಪತ್ರ ತಾಲ್ಲೂಕು ಕಛೇರಿಯ ಬಳಿ ಇರುವ ಗುಮಾಸ್ತರ ಮುಂದೆ ಆಗಿರುತ್ತದೆ. ಸದರಿ ಕರಾರು ಪತ್ರದಲ್ಲಿರುವ ಬರವಣಿಗೆಯನ್ನು ನಮ್ಮ ಸಮಕ್ಷಮ ಬರೆಸಿದ್ದರು ಎಂದರೆ ಸರಿ. ನಿಪಿ-15 ರಲ್ಲಿ ಪುಟ ಸಂಖ್ಯೆ 2 ರಲ್ಲಿ ಖಾತೆ ನಂ.727 ಈ ಜಮೀನು ಸಣಗಲ್ ಹನುಮಪ್ಪ ಇವರ ಮೂರನೇ ಮಗ ಎಸ್.ಹೆಚ್.ಮಂಜಣ್ಣ ಇವರು ಸ್ವಯಾರ್ಜಿತವಾಗಿ ಖರೀದಿಸಿದ್ದು ಎಂದು ಉಲ್ಲೇಖ ಇದೆ ಎಂದರೆ ಸಾಕ್ಷಿಯು ಅದು ತಪ್ಪಾಗಿ ಉಲ್ಲೇಖ ಆಗಿದೆ ಎನ್ನುತ್ತಾರೆ. ಕರಾರು ಪತ್ರವಾನ್ನು ನಾನು, ಪ್ರತಿವಾದಿ ಮತ್ತು ತಿಪ್ಪೇಸ್ವಾಮಿ ಮಾಡಿಕೊಂಡಿದ್ದೆವು.

ಆ ಕರಾರು ಪತ್ರದಲ್ಲಿ ನನ್ನ ತಂಗಿ ಭಾಗ್ಯಮ್ಮನ ಮಗಳನ್ನು ಸೇರಿಸಿಕೊಂಡಿಲ್ಲ ಎಂದರೆ ಸರಿ. ಭಾಗ್ಯಮ್ಮನ ಮಗಳು ಅವಶ್ಯಕ ಪಕ್ಷಗಾರರು ಎಂದರೆ ಸರಿಯಲ್ಲ. ನನ್ನ ತಂಗಿ ಭಾಗ್ಯಮ್ಮನ ಮಗಳು ಸೌಂದರ್ಯ ರವರನ್ನು ಕರಾರು ಪತ್ರದಲ್ಲಿ ಸೇರಿಸಿಕೊಳ್ಳದೇ ಇರುವುದರಿಂದ ಸದರಿ ದಾಖಲೆ ಕಾನೂನು ಬದ್ಧ ಅಲ್ಲ ಎಂದರೆ ಸರಿಯಲ್ಲ. ಕರಾರು ಪತ್ರ ಮಾಡಿಕೊಳ್ಳುವ ಸಮಯದಲ್ಲಿ ಸಾಕ್ಷಿಧಾರರಾದ ಅಲ್ಲಾಡಿ ವಿಜಯಕುಮಾರ್, ದೊಡ್ಡಘಟ್ಟದ ತಿಪ್ಪೇಸ್ವಾಮಿರವರು ಇದ್ದರು. ಅಂದು ಒಂದೇ ಕರಾರು ಪತ್ರ ಮಾಡಿದ್ದೆವು. ದಿನಾಂಕ 21.11.2017 ರಂದು ನನ್ನ ಮತ್ತು ಪ್ರತಿವಾದಿಯರ ನಡುವೆ ಕರಾರು ಪತ್ರ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮಾತುಕತೆಯಾದ ಮೂರು ದಿನಕ್ಕೆ ಕರಾರು ಪತ್ರ ಆಗಿರುತ್ತದೆ. ಈ ಕುರಿತು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಸರ್ವೆ ನಂ.137/1 ಕ್ಷೇತ್ರ 3 ಎಕರೆ 10 ಗುಂಟೆ ಮತ್ತು ಸರ್ವೆ ನಂ.5/5 ಜಮೀನು ಪಿತ್ರಾರ್ಜಿತ ಸ್ವತ್ತುಗಳು ಇದ್ದವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸಾಕ್ಷಿಯು 3 ಎಕರೆ 10 ಗುಂಟೆ ಜಮೀನು ನನ್ನ ತಾಯಿಯ ಆಸ್ತಿ ಎನ್ನುತ್ತಾರೆ. ಚಿಪ್ಪಿನಕೆರೆ ಗ್ರಾಮದಲ್ಲಿದ್ದ ಜಮೀನನ್ನು ಮಾರಾಟ ಮಾಡಿ ಜಮೀನನ್ನು ಖರೀದಿಸಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ.163/7 ನಮ್ಮ ಒಟ್ಟು ಕುಟುಂಬದ ಜಮೀನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಒಟ್ಟು ಕುಟುಬಂದಲ್ಲಿ ತಂದೆ ತೀರಿದ ನಂತರ ಹಿರಿಯ ಮಗ ಯಜಮಾನನಾಗುತ್ತಾನೆ ಎಂದರೆ ಸರಿ. ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯನ್ನು ಪಡೆದುಕೊಳ್ಳಬೇಕೆಂಬ ದುರುದ್ದೇಶದಿಂದ ದಿನಾಂಕ 21.11.2017 ರ ಕರಾರು ಪತ್ರವನ್ನು ಸೃಷ್ಟಿಸಿಕೊಂಡು ಸುಳ್ಳು ಮಾಹಿತಿ ನೀಡಿ ಈ ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚುಮಾಡಲಾಯಿತು}**

ಓ ಹೇ ಕೇ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ಮತ್ತು ಸಿ ಜೆ ಎಂ ನ್ಯಾಯಾಧೀಶರು
ಚಿತ್ರದುರ್ಗ